ಗಳಿಸಿಕೊಂಡ. ರಾಮ್ ಲಾಲ್ ಕೆಲಸ ಮಾಡುತ್ತಿದ್ದ ಸೆಕ್ಷನ್ನಿನ ಸೂಪರ್ ವೈಸರ್ ಧರ್ಮ ಪಾಲ್ ಕೂಡ ಅವನು ಬರುತ್ತಿದ್ದ ಏರಿಯಾದಿಂದಲೇ ಬರುತ್ತಿದ್ದ. ಒಂದು ದಿನ ಆತ ಆ ಏರಿಯಾದ ಫುಡ್ ಆಫೀಸಿಗೆ ರಾಮ್ ಲಾಲನನ್ನು ಕರೆದುಕೊಂಡು ಹೋಗಿ ರೇಷನ್ ಕಾರ್ಡ್ ಮಾಡಿಸಿಕೊಟ್ಟಿದ್ದ. ರಾಮ್ ಲಾಲ್ ಬೆಳಿಗ್ಗೆಯೇ ಎದ್ದು ಅಡುಗೆ ಮಾಡಿ, ಊಟ ಮಾಡಿ, ಮಧ್ಯಾಹ್ನಕ್ಕೂ ಕ್ಯಾರಿಯರ್ ಕಟ್ಟಿಕೊಂಡು ಹೋಗುತ್ತಿದ್ದ. ಇದೇ ಸಂದರ್ಭದಲ್ಲಿ ಊರಿನಲ್ಲಿದ್ದ ತಮ್ಮ ತಾರಾನಾಥ ಹತ್ತನೆಯ ತರಗತಿಯಲ್ಲಿ ಪಾಸಾಗದೆ ಉಳಿದಿದ್ದ ಎರಡು ಪಾರ್ಟುಗಳನ್ನು ಕಟ್ಟಿಕೊಂಡು ಪಾಸು ಮಾಡಿದ ಸುದ್ದಿ ತಿಳಿದು ಖುಷಿಗೊಂಡಿದ್ದ. ಈ ಬಾರಿ ಊರಿಗೆ ಹೋದಾಗ ತಮ್ಮ ತಾರಾನಾಥನನ್ನೂ ತನ್ನೊಂದಿಗೆ ದಿಲ್ಲಿಗೆ ಕರೆದುಕೊಂಡು ಬಂದಿದ್ದ ದುಡಿಯಲೆಂದು. ಅದೇ ಸಂದರ್ಭದಲ್ಲಿ ರಾಮ್ ಲಾಲನ ರೂಂಮೇಟ್ ಫರಿದಾಬಾದಿನ ಒಳ್ಳೆಯ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿ ರೂಂ ಖಾಲಿ ಮಾಡಿ ಹೋಗಿದ್ದ. ಅದು ರಾಮ್ ಲಾಲನಿಗೆ ಬಹಳ ಅನುಕೂಲವೇ ಆಗಿತ್ತು. ಇಲ್ಲದಿದ್ದ ಪಕ್ಷದಲ್ಲಿ ಅವನು ತಮ್ಮನೊಂದಿಗೆ ಬೇರೊಂದು ಮನೆಯನ್ನು ಹುಡುಕಿಕೊಂಡು ಹೋಗಬೇಕಿತ್ತು. ಆ ಏರಿಯಾದಲ್ಲಿ ಮನೆ ಸಿಗುವುದು ಕಷ್ಟವಾಗಿತ್ತು. ಬಿಟ್ಟು ಹೋಗುವಾಗ ಕಣ್ಣು ತುಂಬಿಕೊಂಡು ರೂಂಮೇಟ್‌ಗೆ ತುಂಬಾ ತುಂಬಾ ಧನ್ಯವಾದಗಳನ್ನು ಹೇಳಿದ್ದ. ತಾರಾನಾಥನಿಗೆ ಡ್ರೈವಿಂಗ್‌ನಲ್ಲಿ ತುಂಬಾ ಆಸಕ್ತಿ ಇದ್ದುದ್ದರಿಂದ ಅವನನ್ನು ಡ್ರೈವಿಂಗ್ ಸ್ಕೂಲಿಗೆ ಸೇರಿಸಿದ್ದ. ತಿಂಗಳಲ್ಲಿ ಡ್ರೈವಿಂಗ್ ಲೈಸೆನ್ಸ್ ಸಿಕ್ಕಿತ್ತು. ಸೋಮದೇವನ ಸಹಾಯದಿಂದ ಟ್ರಾವೆಲ್ಸ್ ಕಂಪನಿಯೊಂದರಲ್ಲಿ ತಾರಾನಾಥನಿಗೆ ಡ್ರೈವರ್ ಕೆಲಸ ಸಿಕ್ಕಿತ್ತು. ತಿಂಗಳಿಗೆ ಹನ್ನೆರಡು ಸಾವಿರ ವೇತನ ಮತ್ತು ಬಾಟಗೀಟ ಅಂತ ನಾಲ್ಕು ಸಾವಿರ ಸಿಗುತ್ತಿತ್ತು. ಎಲ್ಲವನ್ನೂ ತಂದು ತನಗೇ ಕೊಡುತ್ತಿದ್ದ. ರಾಮ್ ಲಾಲ್ ತಮ್ಮನಿಗೆ ಖರ್ಚಿಗೆಂದು ಹಿಂತಿರುಗಿ ಒಂದೂವರೆ ಸಾವಿರ ಕೊಡುತ್ತಿದ್ದ. ಇಂಥ ಸಮಯದಲ್ಲಿ ರಾಮ್ ಲಾಲ್ ಒಂದಿಷ್ಟು ಕನಸು ಕಾಣತೊಗಿದ. ಊರೆಂದರೆ ರಾಮ್ ಲಾಲನಿಗೆ ಇನ್ನಿಲ್ಲದ ಪ್ರೀತಿ ಮಮತೆಗಳಿದ್ದವು. ಸಾಕಷ್ಟು ದುಡ್ಡು ಕೂಡಿದ ಮೇಲೆ ಎರಡೆಕರೆ ಜಮೀನಿನಲ್ಲಿ ಬೋರ್ವೆಲ್ ಹಾಕಿಸುವುದು. ಗೋಧಿ, ಜೋಳ ಬೆಳೆದುಕೊಂಡು ಊರಿನಲ್ಲಿ ಒಂದು ಒಳ್ಳೇ ಕುಳ ಎನಿಸಿಕೊಳ್ಳುವುದು. ಅಂಗಾತ ಮಲಗಿ ನಕ್ಷತ್ರಗಳನ್ನು ನೋಡಿ ಸಂಭ್ರಮಿಸುತ್ತಿದ್ದ ದಿನಗಳು ನೆನಪಾದವು. ಎಷ್ಟಾದರಾಗಲೀ ತಮ್ಮಂಥವರು ಸ್ವಂತ ಊರಿನಲ್ಲೇ ಬದುಕು ಕಟ್ಟಿಕೊಳ್ಳಬೇಕು. ಬೇರೆಲ್ಲೂ ಶಾಶ್ವತವಾದ ನೆಲೆ ತಮ್ಮಂಥ ವಲಸೆ ಕಾರ್ಮಿಕರಿಗೆ ದಕ್ಕುವುದಿಲ್ಲವೆಂಬ ಸತ್ಯ ರಾಮ್ ಲಾಲನಿಗೆ ತಿಳಿಯದ್ದೇನಲ್ಲ. ತಂಗಿಗೆ ಮದುವೆ ಮಾಡಿಬಿಟ್ಟರೆ ತನ್ನ ಜವಾಬ್ದಾರಿ ಮುಗಿದಂತೆ. ಆ ನಂತರ ತಾನೊಂದು ಮದುವೆಯಾಗಿ ಊರಲ್ಲಿ ನೆಲೆ ನಿಲ್ಲುವುದು. ಈ ದೇಶದ ಲಕ್ಷಾಂತರ ಗ್ರಾಮೀಣ ಯುವಕರಂತೆ ರಾಮ್ ಲಾಲನ ಎದೆಯಲ್ಲೂ ಕನಸುಗಳು ಪುಟಿಯುವುದು ಸಾಮಾನ್ಯ ಸಂಗತಿಯೇ ಆಗಿತ್ತು. ಊರಿಗೆ ಹೋದಾಗಲೆಲ್ಲ ಅಪ್ಪ ಅಮ್ಮ ಇಬ್ಬರೂ, "ರಾಮು ನಿಂಗೆ ಆಗ್ಲೆ ಇಪ್ಪತ್ತೈದು ವರ್ಷ ತುಂಬೋಯ್ತು. ನೀನು ಊಂ ಅಂದ್ರೆ ಎಲ್ಲಾದ್ರೂ ಹುಡುಗಿ ನೋಡ್ತೀವಿ. ನಮ್ಮ ಪಕ್ಕದ ಮನೆ ಹರಭಜನ್ ನೋಡು, ನೀವಿಬ್ಬರೂ ಒಂದು ತಿಂಗಳು ಆಚೀಚೆ ಹುಟ್ಟಿದವರು. ಅವನಿಗಾಗಲೇ ಇಬ್ಬರು ಮಕ್ಕಳು. ದೊಡ್ಡವನು ಅಂಗನವಾಡಿಗೆ ಹೋಗ್ತಾ ಇದಾನೆ..." ಎಂದು ಮಾತು ತೆಗೆಯುತ್ತಿದ್ದರೂ, ರಾಮ್ ಲಾಲ್ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.

ನೆನಪುಗಳಿಂದ ಕಳಚಿಕೊಂಡು ರಾಮ್ ಲಾಲ್ ಊಟ ಮಾಡಿ ಕೈ ತೊಳೆಯುವ ಹೊತ್ತಿಗೆ ಬಾಗಿಲು ಬಡಿದ ಸದ್ದು ಕೇಳಿತ್ತು. ಹೋಗಿ ಬಾಗಿಲು ತೆರೆದಿದ್ದ. ತಮ್ಮ ತಾರಾನಾಥ ನಿಂತಿದ್ದ. ಮುಖದಲ್ಲಿ ಏನೋ ಬದಲಾವಣೆಯಿತ್ತು. ತಾರಾನಾಥ ತನ್ನಂತಲ್ಲದೆ ಯಾರನ್ನೇ ಆಗಲಿ ಮಾತನಾಡಿಸಿ ಗೆಳೆತನ ಮಾಡಿಕೊಳ್ಳುವ ಸ್ವಭಾವದವನಾಗಿದ್ದ. ಹಾಗಾಗಿ ಅವನು ಬಂದು ಆರೇಳು ತಿಂಗಳಾಗಿದ್ದರೂ ಆ ಏರಿಯಾದಲ್ಲಿ ಸುಮಾರು ಜನರ ಗೆಳೆತನ ಸಂಪಾದಿಸಿದ್ದ. ತಾರಾನಾಥ ಒಳಗೆ